# ಬಾಗಿಲು ತೆರೆದ 'ಎನ್‌ಡಿಎ'

17

'ರಾಷ್ಟ್ರೀಯ ರಕ್ಷಣಾ ಅಕಾಡೆಮಿ'ಯಲ್ಲಿ ('ಎನ್‌ಡಿಎ') ಮಹಿಳೆಯರ ಸೇರ್ಪಡೆಗೆ ಅವಕಾಶ ಕಲ್ಪಿಸಬೇಕೆನ್ನುವ ಒತ್ತಾಯಕ್ಕೆ ಕೇಂದ್ರ ಸರ್ಕಾರ ಮತ್ತು ಸಶಸ್ತ್ರ ಪಡೆಗಳು ಓಗೊಟ್ಟಿದ್ದು 2021ರ ಮಹತ್ವದ ಸಂಗತಿಗಳಲ್ಲೊಂದು. ಈ ನಿರ್ಣಯ, ಭಾರತೀಯ ಸೇನೆ ಮತ್ತಷ್ಟು ಶಕ್ತಿಯುತಗೊಳ್ಳಲು ಹಾಗೂ ಸಮತೋಲನ ಸಾಧಿಸುವ ನಿಟ್ಟಿನಲ್ಲಿ ಪ್ರಮುಖವಾದುದು.

'ಎನ್‌ಡಿಎ' ಪ್ರವೇಶದಿಂದ ಮಹಿಳೆಯರನ್ನು ದೂರ ಇರಿಸುವುದು ಸಮಾನತೆಯ ಮೂಲಭೂತ ಹಕ್ಕಿನ ಉಲ್ಲಂಘನೆ ಎನ್ನುವ ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್, ಮಹಿಳೆಯರಿಗೆ ಅವಕಾಶ ನಿರಾಕರಿಸುವ ಮನಸ್ಥಿತಿಯನ್ನು ಬದಲಿಸಿಕೊಳ್ಳುವ ನಿಟ್ಟಿನಲ್ಲಿ ತನ್ನ ತೀರ್ಮಾನವನ್ನು ಲಿಖಿತ ರೂಪದಲ್ಲಿ ತಿಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು. ಆ ಸೂಚನೆಯ ಪ್ರಕಾರ, 'ಎನ್‌ಡಿಎ'ಗೆ ಮಹಿಳೆಯರಿಗೆ ಪ್ರವೇಶ ನೀಡಲು ತನ್ನ ಸಮ್ಮತಿ ಸೂಚಿಸಿದೆ. ಈ ನಿರ್ಧಾರದಿಂದಾಗಿ ರಕ್ಷಣಾ ಪಡೆಗಳಲ್ಲಿ ಲಿಂಗ ತಾರತಮ್ಯ ನಿವಾರಣೆಯತ್ತ ನಿರ್ಣಾಯಕ ಹೆಜ್ಜೆ ಇಟ್ಟಂತಾಗಿದೆ.

ಸೇನೆಯಲ್ಲಿ ಮಹಿಳೆಯರ ಸೇರ್ಪಡೆಯ ಬಗ್ಗೆ ಸರ್ಕಾರದ ಹಿಂಜರಿಕೆ ಇಂದಿನದೇನೂ ಅಲ್ಲ. 'ಭಾರತೀಯ ಸೇನೆ'ಗೆ ಮಹಿಳೆ ಪ್ರವೇಶ ಪಡೆಯಲು ದೇಶಕ್ಕೆ ಸ್ವಾತಂತ್ರ್ಯ ಬಂದು ನಾಲ್ಕೂವರೆ ದಶಕಗಳು ಬೇಕಾದವು. ಮಹಿಳೆಯರಿಗೆ ಸಶಸ್ತ್ರ ಪಡೆಗಳ ಬಾಗಿಲು ತೆರೆದದ್ದು 1992ರಲ್ಲಿ. ಆದರೂ, ಹುದ್ದೆಯಲ್ಲಿ ಮೇಲೇರದಂತೆ – ಕಮಾಂಡರ್ ಸ್ಥಾನಕ್ಕೆ ಬಾರದಂತೆ – ಮಹಿಳೆಯರನ್ನು ತಡೆಯಲಾಗಿತ್ತು. 2010ರಲ್ಲಿ, ಕಮಾಂಡರ್ ಸೇರಿದಂತೆ ಸೇನೆಯಲ್ಲಿನ ಕಾಯಂ ಸೇವೆಯ ಹುದ್ದೆಗಳಿಗೆ ಮಹಿಳೆಯರನ್ನು ನೇಮಿಸಬೇಕು ಎಂದು ದೆಹಲಿ ಹೈಕೋರ್ಟ್ ಆದೇಶಿಸಿತು. ಆ ಆದೇಶವನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಹತ್ತು ವರ್ಷಗಳ ವಿಚಾರಣೆಯ ನಂತರ ಸುಪ್ರೀಂ ಕೋರ್ಟ್, ಭಾರತೀಯ ಸೇನೆಯಲ್ಲಿ ಮಹಿಳಾ ಅಧಿಕಾರಿಗಳ ಅವಕಾಶಗಳಿಗೆ ಇದ್ದ ಮಿತಿಯನ್ನು ತೆಗೆದುಹಾಕಿತ್ತು.

ಸೇನಾಪಡೆಗಳಿಗೆ ಮಹಿಳೆಯರ ಸೇರ್ಪಡೆಯ ಬಗ್ಗೆ ಮುಕ್ತವಾಗಿರಬೇಕೆಂದು ಸುಪ್ರೀಂ ಕೋರ್ಟ್ ಹೇಳಿದರೂ, ಮಹಿಳೆಯರ ಬಗ್ಗೆ ಸರ್ಕಾರ ಹಾಗೂ ಸೇನಾಪಡೆಗಳು ಮುಕ್ತ ಮನಸ್ಸು ಹೊಂದಿರುವಂತಿಲ್ಲ. ಈವರೆಗೆ 'ಎನ್‌ಡಿಎ' ಪರೀಕ್ಷೆ ತೆಗೆದುಕೊಳ್ಳಲು ಮಹಿಳೆಯರಿಗೆ ಅವಕಾಶ ಇರಲಿಲ್ಲ. 'ಎನ್‌ಡಿಎ' ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮಾತ್ರ ಸೇನೆಯಲ್ಲಿ ಕಾಯಂ ನೇಮಕಾತಿ ಉದ್ಯೋಗಕ್ಕೆ ಅರ್ಹರಾಗುವುದರಿಂದ, ಕಾಯಂ ಹುದ್ದೆಗಳಿಂದ ಮಹಿಳೆಯರು ವಂಚಿತರಾಗುತ್ತಲೇ ಇದ್ದರು. ಈಗ ಸುಪ್ರೀಂ ಕೋರ್ಟ್ ಮಧ್ಯಪ್ರವೇಶದಿಂದಾಗಿ ಸರ್ಕಾರ ತನ್ನ ನಿಲುವು ಬದಲಿಸಿದೆ.

'ನ್ಯಾಯಾಲಯದ ನಿರ್ದೇಶನ ಕಾಯದೆ, ಲಿಂಗ ಸಮಾನತೆಯ ಸಾಧನೆಗಾಗಿ ರಕ್ಷಣಾಪಡೆಗಳು ಸ್ವಯಂಪ್ರೇರಿತ ಕ್ರಮಗಳನ್ನು ಕೈಗೊಳ್ಳಬೇಕು. ದೇಶದ ಗೌರವಾನ್ವಿತ ಪಡೆಗಳು ಲಿಂಗ ಸಮಾನತೆಗಾಗಿ ಕೆಲಸ ಮಾಡಬೇಕು' ಎನ್ನುವ ಸುಪ್ರೀಂ ಕೋರ್ಟ್ ಮಾತುಗಳು ಸಮಾಜದ ಎಲ್ಲ ಕ್ಷೇತ್ರಗಳಿಗೂ ಕಿವಿಮಾತಿನಂತಿವೆ. ಕೌಟುಂಬಿಕ ಹೊಣೆಗಾರಿಕೆ, ಗರ್ಭಧಾರಣೆ, ತಾಯ್ತನದ ಜವಾಬ್ದಾರಿಯಂತಹ ನೆಪಗಳನ್ನು ನೀಡಿ ಹೆಣ್ಣುಮಕ್ಕಳನ್ನು ಉದ್ಯೋಗಕ್ಷೇತ್ರದಲ್ಲಿ ಎರಡನೇ ಆಯ್ಕೆಯನ್ನಾಗಿ ನೋಡಲಾಗುತ್ತಿದೆ. ದೇಹಬಲದ ನೆಪ ಹೇಳಿ ಅವಕಾಶವನ್ನು ನಿರಾಕರಿಸುವುದು ಲಿಂಗಭೇದದ ಆಚರಣೆಯೇ ಆಗುತ್ತದೆ. ಹೆಣ್ಣಿಗೆ ವಿಶಿಷ್ಟವಾದ ಧಾರಣಾಶಕ್ತಿ, ಸಹನಶೀಲತೆ ಹಾಗೂ ಇಚ್ಛಾಶಕ್ತಿಯ ಎದುರು ಚಂಚಲ ಸ್ವಭಾವದ ಗಂಡಿನ 'ಪೌರುಷ'ಕ್ಕೆ ಹೆಚ್ಚಿನ ಕಿಮ್ಮತ್ತಿಲ್ಲ. ಯಾವುದೇ ಕ್ಷೇತ್ರದಲ್ಲಿ ನಿಜವಾದ ಅರ್ಥದಲ್ಲಿ ಸಮಾನತೆ ಸಾಧ್ಯವಾಗಬೇಕಿದ್ದರೆ ಮೊದಲು ಆ ಕ್ಷೇತ್ರದ ಪುರುಷರ ಮನಸ್ಥಿತಿಯಲ್ಲಿ ಬದಲಾವಣೆ ಆಗಬೇಕಿದೆ. ಅಂಥದೊಂದು ಬದಲಾವಣೆಗೆ 'ಎನ್‌ಡಿಎ'ಗೆ ಮಹಿಳೆಯರ ಪ್ರವೇಶಕ್ಕೆ ಅವಕಾಶ ಕಲ್ಪಿಸಿರುವ ತೀರ್ಮಾನ ಪೂರಕವಾಗಿದೆ.

# ದೀದಿ ಹೊಸ ಪಾಠ

18

ತೆರೆಮರೆಗೆ ಸರಿಯುತ್ತಿರುವ ಈ ವರ್ಷ ಬಿಟ್ಟು ಹೋಗುತ್ತಿರುವ ರಾಜಕೀಯ ಸಂದೇಶ ಬಲು ಸ್ಪಷ್ಟವಾಗಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರು ಪ್ರತಿನಿಧಿಸುತ್ತಿರುವ ಬಿಜೆಪಿಯು ತನ್ನ ಪ್ರಭಾವ ಉಳಿಸಿಕೊಳ್ಳಲು ಪ್ರಯಾಸಪಡುತ್ತಿದೆ ಎನ್ನುವುದೇ ಆ ಸಂದೇಶ. ರಾಜಕೀಯ ಜಿದ್ದಿಗೆ ಸಾಕ್ಷಿಯಾಗಿದ್ದ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹ್ಯಾಟ್ರಿಕ್ ಜಯ ಸಾಧಿಸಿ, ಮತ್ತೆ ಅಧಿಕಾರದ ಗದ್ದುಗೆಗೆ ಏರಿತು. ಆ ರಾಜ್ಯದಲ್ಲಿ ಅಧಿಕಾರ ಹಿಡಿಯಲೇಬೇಕು ಎಂಬ ಒಂದೇ ಉದ್ದೇಶದಿಂದ ತನ್ನ ಬತ್ತಳಿಕೆಯಲ್ಲಿ ಇದ್ದ ಎಲ್ಲ ಅಸ್ತ್ರಗಳನ್ನೂ ಬಳಸಿಕೊಂಡ ಬಿಜೆಪಿಗೆ, ಅಲ್ಲಿನ ಸೋಲು ಆಘಾತ ಉಂಟುಮಾಡಿತು.

2019ರ ಲೋಕಸಭಾ ಚುನಾವಣೆಯಲ್ಲಿ ಸಿಕ್ಕ ಜಯದ ಉಮೇದಿನಲ್ಲಿ ವಿಧಾನಸಭೆಯೂ ಸುಲಭದ ತುತ್ತು ಎಂದು ಬಿಜೆಪಿ ಭಾವಿಸಿತ್ತು. ಖುದ್ದು ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರು ಹತ್ತಾರು ರ್‍ಯಾಲಿಗಳನ್ನು ನಡೆಸಿ, ಮಮತಾ ಅವರನ್ನು ಲೇವಡಿ ಮಾಡಿದ್ದರು, ರಾಜಕೀಯ ಶಿಷ್ಟಾಚಾರಗಳ ಮಿತಿಯನ್ನು ಮೀರಿದ್ದರು. ಸ್ಥಳೀಯರು ಮತ್ತು ಹೊರಗಿನವರು ಎಂಬುದು ಅಲ್ಲಿ ಪ್ರಮುಖ ಚುನಾವಣಾ ವಿಷಯವಾಗಿತ್ತು. ಕಾಲಿಗೆ ಪೆಟ್ಟಾದರೂ ಧೃತಿಗೆಡದೆ ಹೋರಾಟ ನಡೆಸಿದ ಮಮತಾ ಅವರ ಕೆಚ್ಚಿನ ಮುಂದೆ ಬಿಜೆಪಿಯ ಆಟ ನಡೆಯಲಿಲ್ಲ. ಚುನಾವಣೆ ಹೊಸ್ತಿಲಲ್ಲಿ ಇದ್ದಾಗ ಟಿಎಂಸಿಯ ವರ್ಚಸ್ವಿ ನಾಯಕರನ್ನು ಸೆಳೆದುಕೊಂಡರೂ ಬಿಜೆಪಿಗೆ ನಿರೀಕ್ಷಿತ ಫಲ ದೊರೆಯಲಿಲ್ಲ.

ತಮಿಳುನಾಡಿನಲ್ಲಿ ಎಐಎಡಿಎಂಕೆ ಅಧಿಕಾರ ಕಳೆದುಕೊಂಡಿದ್ದು, ಹತ್ತು ವರ್ಷಗಳ ನಂತರ ಡಿಎಂಕೆ ನೇತೃತ್ವದ ಸರ್ಕಾರ ಬಂತು. ಕೇರಳದಲ್ಲಿ ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್‌ಗೆ ಸತತ ಎರಡನೆಯ ಬಾರಿ ಸರ್ಕಾರ ರಚಿಸುವ ಅವಕಾಶ ಸಿಕ್ಕಿತು. ಅಸ್ಸಾಂ ರಾಜ್ಯದಲ್ಲಿ ಸಿಎಎ ಅಥವಾ ಎನ್‌ಆರ್‌ಸಿ ಚಳವಳಿಯು ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರಿಲ್ಲ ಎಂಬುದನ್ನು ಫಲಿತಾಂಶ ತೋರಿಸಿತು. ಅಲ್ಲಿ ಬಿಜೆಪಿ ಅಧಿಕಾರವನ್ನು ಉಳಿಸಿಕೊಂಡಿತು.

ಕೇಂದ್ರದ ಗದ್ದುಗೆ ಹಿಡಿಯಲು ಮೊದಲ ಮೆಟ್ಟಿಲು ಎನಿಸಿರುವ ಉತ್ತರ ಪ್ರದೇಶ ವಿಧಾನಸಭೆಯ ಚುನಾವಣೆ ಹೊಸ ವರ್ಷದ ಆರಂಭದಲ್ಲಿ ನಡೆಯಲಿದ್ದು, ಆ ಚುನಾವಣೆಯತ್ತಲೇ ಈಗ ಎಲ್ಲರ ಕಣ್ಣು ನೆಟ್ಟಿದೆ.

